ನೋಡುತ್ತಿರುವಂತೆ ಖಾತ್ರಿಯಾಗುತ್ತಲೇ ಶಿರೀನ್‌ಳನ್ನು ಒಂದು ರೀತಿಯ ನಿರಾಳತೆ ಆವರಿಸಿತು, ತನ್ನ ಕಾಲ ಮೇಲೆ ತಾನು ನಡೆದು ಬರುವಂತಿದ್ದಾಳಲ್ಲಾ ಎಂದು. ಕಿಟಕಿಯಿಂದ ಕಣ್ಣು ಕಿತ್ತು ಮುಂಬಾಗಿಲಿನತ್ತ ಓಡಿದಳು ಶಿರೀನ್. ಅವರ ಮುಖಗಳು ಕಾಣುತ್ತಲೇ ಶೀರೀನ್‌ಳ ಸಿಟ್ಟು ಭುಗಿಲೆದ್ದಿತು. ಅವರಿಬ್ಬರೂ ತಲೆಎತ್ತಿ ನಿಂತ ರೀತಿ ಅವಳನ್ನು ಇನ್ನಷ್ಟು ಕೆರಳಿಸಿತು. ತಾನು ನಿನ್ನೆಯಿಂದ ಚಡಪಡಿಸುತ್ತಿದ್ದರೆ, ಗೌರಿ ನಿರಾಳವಾಗಿದ್ದಾಳೆ! ಅವರ ಭಂಡ ಧೈರ್ಯಕ್ಕೆ ಅಚ್ಚರಿಯೂ ಆಯಿತು. ಗೌರಿಯ ಮುಖದ ಮೇಲಿನ ಮುಗ್ಧತೆ ಅವಳ ಎತ್ತಿದ ಕೈಯ್ಯನ್ನು ಅಲ್ಲೇ ತಡೆಯಿತು. ಹಿಂದೆಯೇ ಬಂದರು ಬಾಳಣ್ಣ ಮತ್ತು ರಾಜು. 'ಅಕ್ಕಾ ಮದಲ ಒಳಗ ಹೋಗೂಣ ನಡಿ' ಎಂದ ರಾಜು.

'ರಾತ್ರಿ ಎಲ್ಲಾ ಅವನ ಜೋಡಿ ಇದ್ದು, ಮಾರಿ ಎತಗೊಂಡ ಬಂದೀಯಲಾ, ನಾಚಿಕಿ ಆಗಂಗಿಲ್ಲೇನು? ಹೀಂಗ ಮನಿಯಿಂದ ಗಾಯಬ ಆದ್ರ ನಾ ಏನಂತ ತಿಳಕೋಬೇಕು? ರಾತ್ರಿ ಇಡೀ ಕಣ್ಣಿಗೆ ಕಣ್ಣ ಹತ್ತಲಿಲ್ಲ. ಈಗ ಪೊಲೀಸ್ ಕಂಪ್ಲೇಂಟ್ ಕೊಡೂದೊಂದ ಉಳದಿತ್ತು. ನನ್ನ ಮನ್ಯಾಗಿರೂ ತನಕಾ ನೀ ನನ್ನ ಜವಾಬ್ದಾರಿ ಇದ್ದೀ... ಉತ್ತರಾ ಕೊಡು... ನಿಮ್ಮಪ್ಪನೂ ಇಲ್ಲೇ ಇದ್ದಾನ... ಮತ್ತ, ವೀರೇಶಾ ನೀ ಭಾಳ ಸಂಭಾವಿತ ಅಂತ ತಿಳಕೊಂಡಿದ್ದೆ. ಮನ್ಯಾಗ ಹೇಣ್ತಿ ಮಕ್ಕಳ್ನ ಇಟಗೊಂಡು ಇಂಥಾ ಕೆಲಸಾ ಮಾಡಲಿಕ್ಕೆ ನಾಚಿಕಿ ಆಗಲಿಲ್ಲ? ಅದೂ ಆ ಎದುರ್ಗಿನ ಅಂಗಡಿ ಹುಡುಗಾ ಹೇಳೀದಾ ಅಂತ ಗೊತ್ತಾತು, ನೀವಿಬ್ರೂ ಕೂಡಿ ಹೋಗೀರಿ ಅಂತ. ಫೋನ ಸೈತ ಸ್ವಿಚ್‌ಆಫ್ ಮಾಡಿಟ್ಟೀ...' ಶಿರೀನ್ ಸೋಫಾ ಮೇಲೆ ಕುಳಿತು ತಲೆಗೆ ಕೈ ಇಟ್ಟುಕೊಂಡಳು. ಶಿಶಿರ ಎದ್ದು ಬಂದಿದ್ದ. ರಾಜು, ಬಾಳಣ್ಣ, ಗೌರಿ ನಿಂತೇ ಇದ್ದರು. ವೀರೇಶ ಬಾಗಿಲ ಹತ್ತಿರ ನಿಂತಿದ್ದ. ಎಲ್ಲರ ದೃಷ್ಟಿ ಗೌರಿಯತ್ತಲೇ ನೆಟ್ಟಿತ್ತು. ಉಳಿದವರಾರೂ ಬಾಯಿ ತೆರೆಯುವ ಪ್ರಯತ್ನ ಮಾಡಲಿಲ್ಲ.

ಗೌರಿಯ ಸಣ್ಣಗಿನ ದನಿ ಮೌನವನ್ನು ಸೀಳಿಕೊಂಡು ಬಂತು, 'ಅಕ್ಕಾ... ನಾ ಅಪ್ಪಾನ ಗೂಡ ಊರಿಗೆ ಹೋಕ್ಕೀನು...' 'ನೀ ಇರತೇನಂದ್ರೂ ನಾ ಇಟಗೋಳಂಗಿಲ್ಲಿನ್ನ... ನೀ ಇಷ್ಟೆಲ್ಲಾ ಮಾಡಿದ ಮ್ಯಾಲೆ. ಹೋಗು... ನಿಮ್ಮಪ್ಪ ನಿನ್ನ ಕರಕೊಂಡ್ಹೋಗ್ತೇನಂದ್ರ...' ಶಿರೀನ್ ಮತ್ತೆ ಸಿಡಿದಳು. ಅವಳ ಹೊಟ್ಟೆಯ ಸಂಕಟ ಉದುರತೊಡಗಿತ್ತು.

'ಏ ಅಕ್ಕಾ, ಅಕಿ ಹೇಳೂ ಮಾತು ಕೇಳು ಮದ್ಲ... ನೀ ಸುಮ್ಮನ ವದರ್ಯಾಡಬ್ಯಾಡಾ...' ಶಿಶಿರ ಅವಳ ಭುಜ ತಟ್ಟುತ್ತ ಹೇಳಿದ.

'ಅಕ್ಕಾ... ನಾ ಮುಂಜೇನಿಮಟಾ ವೀರೇಶಣ್ಣನ ಮನ್ಯಾಗ ಇದ್ದೆ. ಪಾರೋತೆಕ್ಕಾ ಮತ್ತ ಮಕ್ಕಳ ಗೂಡ... ಅಂವಾ ಗೆಳ್ಯಾನ ಕೋಲೀಗೋಗಿ ಮಲಕೊಂಡಿದ್ದಾ...' ಶಿರೀನ್‌ಳ ಕಣ್ಣಿನಲ್ಲಿ ಅಪನಂಬಿಕೆ. ಮಾಡಬಾರದ್ದನ್ನು ಮಾಡಿದವರು ಸುಳ್ಳಿನ ಮಾಲೆ ಕಟ್ಟುತ್ತಾರೆ. 'ನೀ ಪಾರೋತೆಕ್ಕನ್ನ ಕೇಳ ಬೇಕಾರ... ಈಗ ಬರತಾಳ ಅಕೀನೂ...' ಗೌರಿಯ ಶಾಂತ ದನಿಗೆ ಶಿರೀನ್‌ಳ ಉದ್ವೇಗ ತುಸು ಕಡಿಮೆಯಾದರೂ, ಒಂದರ ಹಿಂದೊಂದು ಪ್ರಶ್ನೆ ತಲೆಎತ್ತಿದವು. ಈ ಆರು ವರ್ಷಗಳಲ್ಲಿ ಎಂದೂ ಮನೆಯಿಂದ ಹೊರಗಿರದ ಗೌರಿ ಏಕಾಏಕಿ ವೀರೇಶನೊಡನೆ ಹೋದದ್ದೇಕೆ? ಶಿಶಿರ ಮನೆಯಲ್ಲೇ ಇದ್ದ... ಮಾವನೂ ತಮ್ಮ ಕೋಣೆಯಲ್ಲಿದ್ದರು... ಯಾರಿಗೂ ತಿಳಿಸಲಿಲ್ಲವೇಕೆ? ತನಗೆ ಒಂದು ಫೋನಾದರೂ ಮಾಡಬಹುದಿತ್ತು... ಈಗ ಇವರೆಲ್ಲ ಒಂದೇ ಸಮಯಕ್ಕೆ ಬಂದರಲ್ಲ?... ಬಾಳಣ್ಣ ಏಕೆ ಏನೂ ಮಾತಾಡುತ್ತಿಲ್ಲ? ಆತನ ಮುಖದ ಮೇಲೆ ಆತಂಕ ಕಾಣುತ್ತಿಲ್ಲವೇಕೆ? ತನಗೇನೂ ತಿಳಿಯುತ್ತಿಲ್ಲ... ಶಿರೀನ್‌ಳ ಕಣ್ಣು ಉತ್ತರಕ್ಕಾಗಿ ಒಂದು ಮುಖದಿಂದ ಇನ್ನೊಂದಕ್ಕೆ ಹರಿದಾಡಿದವು. ತನ್ನ ಊಹೆಯಂತೇನೂ ಇಲ್ಲವಾದರೆ ಮತ್ತೇನು?... ಮತ್ತೇನು?

'ನೀ ಅಂವನ ಜೋಡಿ ಹೋದ್ಯಾಕ ಅದನ್ನ ಹೇಳು ಮದ್ಲ. ಅಂಥಾ ಪ್ರಸಂಗ ಏನ ಬಂತೂ ಅಂತ?... ಎಲ್ಲಾ ಇದ್ದಕ್ಕಿದ್ದಂಗ ಬಿಟ್ಟ ಹೋದ್ರ ನಾ ಏನಂತ ತಿಳಕೋಬೇಕು? ಮುಂಜಾನಿ ತನಕಾ ಒಂದ ಫೋನ್